KACB310012812020

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**

**ಚಿಂತಾಮಣಿ**

**ಉಪಸ್ಥಿತರು : ಶ್ರೀಮತಿ ಹರ್ಷಿತ ಬಿ.ಎ.,ಎಲ್‌ಎಲ್.ಬಿ.,**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ನ್ಯಾಯಾಲಯ ಚಿಂತಾಮಣಿ.**

**ಸಿಸಿ ನಂಃ 566/2020**

**ದಿನಾಂಕಃ 10 ನೇ ಜೂನ್ 2026**

**ಫಿರ್ಯಾದುದಾರರು** : ಚಿಂತಾಮಣಿ ಗ್ರಾಮಾಂತರ ಪೋಲಿಸ್
(ಸರ್ಕಾರದ ಪರವಾಗಿ ಸ.ಸ.ಅ.)

**ವಿರುದ್ಧ**

**ಆರೋಪಿತರುಃ**

1. ಶಿವರಾಜ್ ಬಿನ್ ಮುನಿನಾರಾಯಣಸ್ವಾಮಿ,
ವಯಾಃ 24 ವರ್ಷ,
2. ಮುನಿನಾರಾಯಣಸ್ವಾಮಿ ಬಿನ್ ಶೆಟ್ಟಿಹಳ್ಳಿ ನಾರಾಯಣಪ್ಪ,
ವಯಾಃ 56 ವರ್ಷ,
3. ಶಾಂತಮ್ಮ ಬಿನ್ ಮುನಿನಾರಾಯಣಪ್ಪ,
ವಯಾಃ 45 ವರ್ಷ,

ಆರೋಪಿ 1 ರಿಂದ 3 ರವರ
ವಾಸಃ ಬೊಮ್ಮೆಕಲ್ಲು ಗ್ರಾಮ,
ಚಿಂತಾಮಣಿ ತಾಲ್ಲೂಕು,
ಚಿಕ್ಕಬಳ್ಳಾಪುರ ಜಿಲ್ಲೆ.

(ಆರೋಪಿತರ ಪರ ಶ್ರೀ.ಟಿ.ವಿ.ಎಸ್., ವಕೀಲರು)

| | |
|---|---|
| ಘಟನೆ ನಡೆದ ದಿನಾಂಕ | 14-05-2020 |
| ವರದಿ ಮಾಡಿದ ದಿನಾಂಕ | 14-05-2020 |
| ಪ್ರಕರಣದ ಸ್ವರೂಪ | ಭಾರತೀಯ ದಂಡ ಸಂಹಿತೆ ಕಲಂಃ 323, 324, 504, 506 ಸಹವಾಚಕ ಕಲಂ 34. |
| ಫಿರ್ಯಾದುದಾರರ ಹೆಸರು | ಸೊಣ್ಣೆಗೌಡ |
| ಸಾಕ್ಷಿ ವಿಚಾರಣೆ ಪ್ರಾರಂಭವಾದಿ ದಿನಾಂಕ | 10-06-2026 |
| ಸಾಕ್ಷಿ ವಿಚಾರಣೆ ಮುಗಿದ ದಿನಾಂಕ | 10-06-2026 |
| ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರು ತಪಿತಸ್ಥರಿರುವುದಿಲ್ಲಾ |

ಸಹಿ/-
(ಶ್ರೀಮತಿ.ಹರ್ಷಿತ)
ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ, ಚಿಂತಾಮಣಿ.

## ತೀರ್ಪು

ಪಿ.ಎಸ್.ಐ. ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆ ಇವರು ಆರೋಪಿತರ ವಿರುದ್ಧ ತನಿಖೆಯನ್ನು ಪೂರೈಸಿ **ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಹವಾಚಕ ಕಲಂ 34** ರಡಿಯಲ್ಲಿ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಾರಾಂಶವೇನೆಂದರೆಃ** ದಿನಾಂಕ 14-05-2020 ರಂದು ಬೆಳಿಗ್ಗೆ 10.00 ರ ಸಮಯದಲ್ಲಿ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ಬೊಮ್ಮೆಕಲ್ಲು ಗ್ರಾಮದ 2 ನೇ ಆರೋಪಿತನು ಅವರ ಮನೆಯ ಬಳಿ ಇರುವ ಸೈಟ್ ನಲ್ಲಿ ನೀರಿನ ಸಂಪ್ ಅನ್ನು ಕಟ್ಟುತ್ತಿದ್ದು, ಆಗ ಚಾಸಾ-1 ರಿಂದ 3 ರವರು

ಸ್ಥಳಕ್ಕೆ ಹೋಗಿ 2 ನೇ ಆರೋಪಿತನನ್ನು ಕುರಿತು ಏಕೆ ನಮ್ಮ ಸೈಟಿನಲ್ಲಿ ಸಂಪ್ ಅನ್ನು ಕಟ್ಟುತ್ತಿರುವುದು ಎಂದು ಕೇಳಿದ್ದಕ್ಕೆ ಸ್ಥಳದಲ್ಲಿದ್ದ ಆರೋಪಿತರು ಚಾಸಾ–1 ರಿಂದ 3 ರವರ ಮೇಲೆ ಜಗಳ ತೆಗೆದು ಚಾಸಾ–1 ರಿಂದ 3 ರವರನ್ನು ಕುರಿತು ಲೇ ಲೋಫರ್ ಸೂಳೆ ನನ್ನ ಮಕ್ಕಳೇ ಎಂದು ಅವ್ಯಾಚ್ಯ ಶಬ್ದಗಳಿಂದ ಬೈದಿರುವುದಲ್ಲದೇ, ಆ ಪೈಕಿ 1 ನೇ ಆರೋಪಿತನು ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ–1 ರವರ ಎಡಭಾಗದ ಬೆನ್ನಿನ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ಮೂಗೇಟುಂಟು ಮಾಡಿರುವುದಲ್ಲದೇ, 2 ನೇ ಆರೋಪಿತನು ಕೈಗಳಿಂದ ಚಾಸಾ–1 ರವರ ಮೈ–ಕೈ ಮೇಲೆ ಹೊಡೆದು ಮೂಗೇಟುಂಟು ಮಾಡಿರುವುದಲ್ಲದೇ, 3 ನೇ ಆರೋಪಿತನು ಚಾಸಾ–1 ರವರನ್ನು ಕುರಿತು ಸದರಿ ಜಾಗದ ತಂಟೆಗೆ ಬಂದರೆ ನಿನ್ನನ್ನು ಮುಗಿಸಿ ಬಿಡುವುದಾಗಿ ಪ್ರಾಣ ಬೆದರಿಕೆ ಹಾಕುವ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಹವಾಚಕ ಕಲಂ 34** ರಡಿಯಲ್ಲಿ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ ನಂತರ ಪೊಲೀಸರು ಸಲ್ಲಿಸಿದ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ, ಆರೋಪಿತರ ವಿರುದ್ಧ ಸಂಜ್ಞೆಯನ್ನು ಕಲಂ 190 ಸಿ.ಆರ್.ಪಿ.ಸಿ ಅಡಿಯಲ್ಲಿ ಭಾ.ದಂ.ಸಂ. ಕಲಂ **323, 324, 504 ಮತ್ತು 506 ಸಹವಾಚಕ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಗೆ ಸಂಜ್ಞೆಯನ್ನು ತೆಗೆದುಕೊಳ್ಳಲಾಗಿರುತ್ತದೆ. ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಡಿಯಲ್ಲಿ ನೀಡಲಾದ ಪದವತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳನ್ನು ಉಚಿತವಾಗಿ ನೀಡಿದ್ದು, ಆರೋಪಿತರ ಮೇಲೆ ದೋಷಾರೋಪಣೆಯನ್ನು ರಚಿಸಿ

ಆರೋಪಿತರಿಗೆ ಓದಿ ಹೇಳಲಾಗಿ, ಆರೋಪಿತರು ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

**4.** ಅಭಿಯೋಜನೆಯು ಆರೋಪಿತರ ವಿರುದ್ಧವಾದ ಅಪರಾಧವನ್ನು ಸಾಭೀತುಪಡಿಸಲು ಫ್ರಾಸಾ-1 ರಿಂದ 3 ರವರನ್ನು ವಿಚಾರಣೆಗೆ ಒಳಪಡಿಸುವ ಮೂಲಕ ನಿಪಿ-1 ರಿಂದ 4 ದಾಖಲಾತಿಯನ್ನು ಗುರುತಿಸಿರುತ್ತಾರೆ. ಫ್ರಾಸಾ-1 ರಿಂದ 3 ರವರು ಪ್ರಮುಖ ಸಾಕ್ಷಿಯಾಗಿದ್ದು ಅಭಿಯೋಜನೆಗೆ ವಿರುದ್ಧವಾದ ಸಾಕ್ಷ್ಯ ನುಡಿದಿದ್ದರಿಂದ ಉಳಿದ ಸಾಕ್ಷಿದಾರರ ವಿಚಾರಣೆ ಮಾಡುವ ಅವಶ್ಯಕತೆ ಕಂಡುಬರುವುದಿಲ್ಲ. ಆದ್ದರಿಂದ ಮಾನ್ಯ ಅಭಿಯೋಜನೆಯ ಪರ ವಕೀಲರ ಮನವಿಯನ್ನು ತಿರಸ್ಕರಿಸಿ, ಸಾಕ್ಷವನ್ನು ಮುಕ್ತಾಯಗೊಳಿಸಲಾಯಿತು. ಆರೋಪಿಗಳಿಗೆ ವಿರುದ್ಧವಾದ ಸಂದರ್ಭ ಮತ್ತು ಸನ್ನಿವೇಶಗಳು ವಿಚಾರಣೆಯಲ್ಲಿ ಬರದೇ ಇದ್ದ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಮನ್ನಾ ಮಾಡಲಾಯಿತು ಮತ್ತು ಆರೋಪಿತರು ತಮ್ಮ ಪರ ಯಾವುದೇ ಸಾಕ್ಷ್ಯ ವಿಚಾರಣೆ ಮಾಡುವುದರ ಮೂಲಕ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲಾ.

**5.** ಉಭಯ ಪಕ್ಷಗಾರರ ವಾದವನ್ನು ಆಲಿಸಿ ದಾಖಲೆಗಳನ್ನು ಪರಿಶೀಲಿಸಿದೆ.

**6.** ಪ್ರಕರಣಕ್ಕೆ ಸಂಬಂದಿಸಿ ತನಿಖಾಧಿಕಾರಿಗಳು ಸಲ್ಲಿಸಿರುವ ದೋಷಾರೋಪಣಾ ಪತ್ರ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ನನ್ನ ಪರಿಗಣನೆಗೆ ಉದ್ಭವಿಸಿದ ಅಂಶಗಳೆಂದರೆಃ

**ಅಂಶಃ1 ಅಭಿಯೋಜನೆಯು ದಿನಾಂಕ 14-05-2020 ರಂದು ಬೆಳಿಗ್ಗೆ 10.00 ರ ಸಮಯದಲ್ಲಿ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ಬೊಮ್ಮೆಕಲ್ಲು ಗ್ರಾಮದ 2 ನೇ ಆರೋಪಿತನು ಅವರ ಮನೆಯ**

ಬಳಿ ಇರುವ ಸೈಟ್ ನಲ್ಲಿ ನೀರಿನ ಸಂಪ್ ಅನ್ನು ಕಟ್ಟುತ್ತಿದ್ದು, ಆಗ ಚಾಸಾ–1 ರಿಂದ 3 ರವರು ಸ್ಥಳಕ್ಕೆ ಹೋಗಿ 2 ನೇ ಆರೋಪಿತನನ್ನು ಕುರಿತು ಏಕೆ ನಮ್ಮ ಸೈಟಿನಲ್ಲಿ ಸಂಪ್ ಅನ್ನು ಕಟ್ಟುತ್ತಿರುವುದು ಎಂದು ಕೇಳಿದ್ದಕ್ಕೆ ಸ್ಥಳದಲ್ಲಿದ್ದ ಆರೋಪಿತರುಸಮಾನ ಉದ್ದೇಶದಿಂದ ಚಾಸಾ–1 ರಿಂದ 3 ರವರ ಮೇಲೆ ಜಗಳ ತೆಗೆದು ಚಾಸಾ–1 ರಿಂದ 3 ರವರನ್ನು ಕುರಿತು ಲೇ ಲೋಫರ್ ಸೂಳೆ ನನ್ನ ಮಕ್ಕಳೇ ಎಂದು ಅವ್ಯಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ – 504 ಸಹವಾಚಕ ಕಲಂ – 34 ರಡಿಯಲ್ಲಿ ಅಪರಾಧವನ್ನು ಎಸಗಿರುತ್ತಾರೆಂದು ರುಜುವಾತು ಪಡಿಸಿದ್ದಾರೆಯೇ?

ಅಂಶಃ2 ಅಭಿಯೋಜನೆಯು ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ 1 ನೇ ಆರೋಪಿತನು ಸುಮಾನ ಉದ್ದೇಶದಿಂದ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ–1 ರವರ ಎಡಭಾಗದ ಬೆನ್ನಿನ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ಮೂಗೇಟುಂಟು ಮಾಡಿದ್ದು, ಆ ಮೂಲಕ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ – 324 ಸಹವಾಚಕ ಕಲಂ – 34 ರಡಿಯಲ್ಲಿ ಶಿಕ್ಷರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ರುಜುವಾತು ಪಡಿಸಿದ್ದಾರೆಯೇ?

ಅಂಶಃ3 ಅಭಿಯೋಜನೆಯು ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ 2 ನೇ ಆರೋಪಿತನು ಸಮಾನ ಉದ್ದೇಶದಿಂದ ಕೈಗಳಿಂದ ಚಾಸಾ–1 ರವರ ಮೈ–ಕೈ ಮೇಲೆ ಹೊಡೆದು ಮೂಗೇಟುಂಟು ಮಾಡಿದ್ದು, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ – 323 ಸಹವಾಚಕ ಕಲಂ – 34 ರಡಿಯಲ್ಲಿ ಶಿಕ್ಷರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ರುಜುವಾತು ಪಡಿಸಿದ್ದಾರೆಯೇ?

ಅಂಶಃ4 ಅಭಿಯೋಜನೆಯು ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ 3 ನೇ ಆರೋಪಿತನು ಸಮಾನ ಉದ್ದೇಶದಿಂದ ಚಾಸಾ–1 ರವರನ್ನು ಕುರಿತು ಸದರಿ ಜಾಗದ ತಂಟೆಗೆ ಬಂದರೆ ನಿನ್ನನ್ನು ಮುಗಿಸಿ ಬಿಡುವುದಾಗಿ ಪ್ರಾಣಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ – 506 ಸಹವಾಚಕ ಕಲಂ – 34

**ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ರುಜುವಾತು ಪಡಿಸಿದ್ದಾರೆಯೇ?**

**ಅಂಶಃ5** **ಆದೇಶ ಏನು?**

7. ಈ ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರಃ

ಅಂಶ 1 ರಿಂದ 4 : ನಕಾರತ್ಮಕವಾಗಿ

ಅಂಶ 5 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

*** ಕಾರಣಗಳು ***

8. **ಅಂಶ 1 ರಿಂದ ಅಂಶ 4–** ಅಂಶ 1 ರಿಂದ 4 ಒಂದಕ್ಕೊಂದು ಸಂಬಂಧ ಹೊಂದಿರುವುದಿರಿಂದ ಸಾಕ್ಷಿದಾರರ ಪುನರಾವರ್ತನೆಯನ್ನು ತಡೆಯುವ ಸಲುವಾಗಿ, ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಯಿತು.

9. ದಿನಾಂಕ 14–05–2020 ರಂದು ಬೆಳಿಗ್ಗೆ 10.00 ರ ಸಮಯದಲ್ಲಿ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ಬೊಮ್ಮೆಕಲ್ಲು ಗ್ರಾಮದ 2 ನೇ ಆರೋಪಿತನು ಅವರ ಮನೆಯ ಬಳಿ ಇರುವ ಸೈಟ್ ನಲ್ಲಿ ನೀರನ ಸಂಪ್ ಅನ್ನು ಕಟ್ಟುತ್ತಿದ್ದು, ಆಗ ಚಾಸಾ–1 ರಿಂದ 3 ರವರು ಸ್ಥಳಕ್ಕೆ ಹೋಗಿ 2 ನೇ ಆರೋಪಿತನನ್ನು ಕುರಿತು ಏಕೆ ನಮ್ಮ ಸೈಟಿನಲ್ಲಿ ಸಂಪ್ ಅನ್ನು ಕಟ್ಟುತ್ತಿರುವುದು ಎಂದು ಕೇಳಿದ್ದಕ್ಕೆ ಸ್ಥಳದಲ್ಲಿದ್ದ ಆರೋಪಿತರು ಚಾಸಾ–1 ರಿಂದ 3 ರವರ ಮೇಲೆ ಜಗಳ ತೆಗೆದು ಚಾಸಾ–1 ರಿಂದ 3 ರವರನ್ನು ಕುರಿತು ಲೇ ಲೋಫರ್ ಸೂಳೆ ನನ್ನ ಮಕ್ಕಳೇ ಎಂದು ಅವ್ಯಾಚ್ಯ ಶಬ್ದಗಳಿಂದ ಬೈದಿರುವುದಲ್ಲದೇ, ಆ ಪೈಕಿ 1 ನೇ ಆರೋಪಿತನು ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ–1 ರವರ ಎಡಭಾಗದ ಬೆನ್ನಿನ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ಮೂಗೇಟುಂಟು ಮಾಡಿರುವುದಲ್ಲದೇ, 2 ನೇ ಆರೋಪಿತನು ಕೈಗಳಿಂದ ಚಾಸಾ–1

ರವರ ಮೈ-ಕೈ ಮೇಲೆ ಹೊಡೆದು ಮೂಗೇಟುಂಟು ಮಾಡಿರುವುದಲ್ಲದೇ, 3 ನೇ ಆರೋಪಿತನು ಚಾಸಾ-1 ರವರನ್ನು ಕುರಿತು ಸದರಿ ಜಾಗದ ತಂಟೆಗೆ ಬಂದರೆ ನಿನ್ನನ್ನು ಮುಗಿಸಿ ಬಿಡುವುದಾಗಿ ಪ್ರಾಣ ಬೆದರಿಕೆ ಹಾಕಿ ಅಪರಾಧ ಮಾಡಿದ್ದಾರೆ ಎಂಬುದಾಗಿರುತ್ತದೆ. ಮೇಲ್ಕಂಡ ಅಂಶಗಳನ್ನು ರುಜುವಾತುಪಡಿಸುವ ಹೊಣೆಗಾರಿಕೆ ಅಭಿಯೋಜನೆಯದ್ದಾಗಿರುತ್ತದೆ.

10. ಅಭಿಯೋಜನೆಯು ಆರೋಪಿತರ ವಿರುದ್ಧ ಅಪರಾಧಗಳನ್ನು ಸಾಭೀತುಪಡಿಸಲು ಚಾಸಾ-1 ಸೊಣ್ಣೇಗೌಡ ರವರು ಫಿರ್ಯಾದುದಾರರಾಗಿದ್ದು, ಇವರನ್ನು ಪ್ರಾಸಾ-1 ರವರನ್ನಾಗಿ ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ಸಾಕ್ಷದಲ್ಲಿ "ಚಾಸಾ-2 ಮತ್ತು ಚಾಸಾ-3 ನನ್ನ ತಮ್ಮಂದಿರು, ಆರೋಪಿಗಳ ಪರಿಚಯವಿದೆ. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಮತ್ತು ಆರೋಪಿತರ ನಡುವೆ ಗಲಾಟೆ ನಡೆದಿಲ್ಲ. ಆರೋ ಪಿತರು ದೊಣ್ಣೆಯಿಂದ ಮತ್ತು ಕೈಗಳಿಂದ ಹೊಡೆದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣಬೆದರಿಕೆಯನ್ನು ಹಾಕಿಲ್ಲ. ನಾನು ಜಮೀನಿನಲ್ಲಿ ಕೆಲಸ ಮಾಡುವಾಗ ಆಯಾ ತಪ್ಪಿ ಬಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ಚಿಂತಾಮಣಿ ಪೊಲೀಸರು ಬಂದು ಕೆಲವು ದಾಖಲೆಗಳನ್ನು ಸಹಿಯನ್ನು ಪಡೆದಿರುತ್ತಾರೆ. ಪೊಲೀಸರಿಗೆ ಯಾವುದೇ ದೂರನ್ನು ಕೊಟ್ಟಿಲ್ಲ. ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆಯನ್ನು ನೀಡಿಲ್ಲ. ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿದರೆ ಗುರುತಿಸಲಾಗುವುದಿಲ್ಲ" ಎಂದು ಸಂಪೂರ್ಣವಾಗಿ ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಸಹಾಯಕ ಸರ್ಕಾರಿ ಅಭಿಯೋಜಕರ ಪ್ರಾರ್ಥನೆ ಮೇರೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿ ಸಹಾಯಕ ಸರ್ಕಾರಿ ಅಭಿಯೋಜಕರು ಸುದೀರ್ಘವಾದ ಪಾಟೀ ಸವಾಲು ಮಾಡಲಾಗಿ ಸಾಕ್ಷಿಯು ಅಭಿಯೋಜನೆಗೆ ಅನುಗುಣವಾದ ಯಾವುದೇ

ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಸಾಕ್ಷಿಗೆ ಹೇಳಿಕೆಯ ಅಂಶಗಳನ್ನು ಓದಿ ಹೇಳಲಾಗಿ ಸಾಕ್ಷಿಯು ಅಲ್ಲಗಳೆದಿರುವುದರಿಂದ ಸಾಕ್ಷಿಯು ಪೊಲೀಸರಿಗೆ ನೀಡಿದ ಮರುಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು.

**11.** ಅಭಿಯೋಜನೆಯು ಆರೋಪಿತರ ವಿರುದ್ಧ ಅಪರಾಧಗಳನ್ನು ಸಾಭೀತುಪಡಿಸಲು ಚಾಸಾ-2 ಶ್ರೀನಿವಾಸ ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಇವರನ್ನು ಫ್ರಾಸಾ-2 ರವರನ್ನಾಗಿ ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ಸಾಕ್ಷದಲ್ಲಿ "ಚಾಸಾ-1 ಮತ್ತು ಚಾಸಾ-3 ನನ್ನ ಅಣ್ಣಂದಿರು. ಆರೋಪಿಗಳ ಪರಿಚಯವಿದೆ. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಗಲಾಟೆ ನಡೆದಿಲ್ಲ. ಆರೋಪಿತರು ದೊಣ್ಣೆಯಿಂದ ಮತ್ತು ಕೈಗಳಿಂದ ಹೊಡೆದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಫ್ರಾಣಬೆದರಿಕೆಯನ್ನು ಹಾಕಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ನ್ಯಾಯಾಲಯದ ಮುಂದಿರುವ ದೊಣ್ಣೆ ನೋಡಿದರೆ ಗುರುತಿಸಲಾಗುವುದಿಲ್ಲ" ಎಂದು ಸಂಪೂರ್ಣವಾಗಿ ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಸಹಾಯಕ ಸರ್ಕಾರಿ ಅಭಿಯೋಜಕರ ಪ್ರಾರ್ಥನೆ ಮೇರೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿ ಸಹಾಯಕ ಸರ್ಕಾರಿ ಅಭಿಯೋಜಕರು ಸುದೀರ್ಘವಾದ ಪಾಟೀ ಸವಾಲು ಮಾಡಲಾಗಿ ಸಾಕ್ಷಿಯು ಅಭಿಯೋಜನೆಗೆ ಅನುಗುಣವಾದ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಸಾಕ್ಷಿಗೆ ಹೇಳಿಕೆಯ ಅಂಶಗಳನ್ನು ಓದಿ ಹೇಳಲಾಗಿ ಸಾಕ್ಷಿಯು ಅಲ್ಲಗಳೆದಿರುವುದರಿಂದ ಸಾಕ್ಷಿಯು ಪೊಲೀಸರಿಗೆ ನೀಡಿದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು.

**12.** ಅಭಿಯೋಜನೆಯು ಆರೋಪಿತರ ವಿರುದ್ಧ ಅಪರಾಧಗಳನ್ನು ಸಾಭೀತುಪಡಿಸಲು ಚಾಸಾ–3 ಗೋಪಾಲ ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಇವರನ್ನು ಫ್ರಾಸಾ–3 ರವರನ್ನಾಗಿ ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ಸಾಕ್ಷದಲ್ಲಿ "ಚಾಸಾ–1 ನನ್ನ ಅಣ್ಣ. ಚಾಸಾ–2 ನನ್ನ ತಮ್ಮ. ಆರೋಪಿಗಳು ನನಗೆ ಗೊತ್ತು. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಗಲಾಟೆ ನಡೆದಿಲ್ಲ. ಆರೋಪಿತರು ದೊಣ್ಣೆಯಿಂದ ಮತ್ತು ಕೈಗಳಿಂದ ಹೊಡೆದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಫ್ರಾಣಬೆದರಿಕೆಯನ್ನು ಹಾಕಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿದರೆ ಗುರುತಿಸಲಾಗುವುದಿಲ್ಲ" ಎಂದು ಸಂಪೂರ್ಣವಾಗಿ ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಸಹಾಯಕ ಸರ್ಕಾರಿ ಅಭಿಯೋಜಕರ ಫ್ರಾರ್ಥನೆ ಮೇರೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿ ಸಹಾಯಕ ಸರ್ಕಾರಿ ಅಭಿಯೋಜಕರು ಸುದೀರ್ಘವಾದ ಪಾಟೀ ಸವಾಲು ಮಾಡಲಾಗಿ ಸಾಕ್ಷಿಯು ಅಭಿಯೋಜನೆಗೆ ಅನುಗುಣವಾದ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಸಾಕ್ಷಿಗೆ ಹೇಳಿಕೆಯ ಅಂಶಗಳನ್ನು ಓದಿ ಹೇಳಲಾಗಿ ಸಾಕ್ಷಿಯು ಅಲ್ಲಗಳೆದಿರುವುದರಿಂದ ಸಾಕ್ಷಿಯು ಪೊಲೀಸರಿಗೆ ನೀಡಿದ ಹೇಳಿಕೆಯನ್ನು ನಿಪಿ–4 ಎಂದು ಗುರುತಿಸಲಾಯಿತು.

**13.** ಈ ಮೇಲಿನ ಫ್ರಾಸಾ–1 ರವರು ಫಿರ್ಯಾದುದಾರರಾಗಿದ್ದು, ಫ್ರಾಸಾ–2 ಮತ್ತು 3 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಸಂಪೂರ್ಣವಾಗಿ ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿದ್ದು, ಆ ಕಾರಣ ಉಳಿದ ಸಾಕ್ಷಿದಾರರುಗಳ ವಿಚಾರಣೆ ಮಾಡುವ ಅವಶ್ಯಕತೆ ಕಂಡುಬರುವುದಿಲ್ಲ. ಸಹಾಯ ಸರ್ಕಾರಿ ಅಭಿಯೋಜಕರು ಇತರ ಸಾಕ್ಷಿದಾರರಿಗೆ ಸಮನ್ಸ್ ನೀಡಲು ಮಾಡಿಕೊಂಡ ಫ್ರಾರ್ಥನೆಯನ್ನು ತಿರಸ್ಕರಿಸಲಾಯಿತು. ಅಭಿಯೋಜನಾ

ಸಾಕ್ಷವನ್ನು ಮುಕ್ತಾಯಗೊಳಿಸಲಾಯಿತು. ಆರೋಪಿಗಳಿಗೆ ವಿರುದ್ಧವಾದ ಸಂದರ್ಭ ಮತ್ತು ಸನ್ನಿವೇಶಗಳು ವಿಚಾರಣೆಯಲ್ಲಿ ಬರದೇ ಇದ್ದ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆಗಳನ್ನು ಮನ್ನಾ ಮಾಡಲಾಯಿತು.

**14.** ಫ್ರಾಸಾ-1 ರಿಂದ 3 ರವರ ಸಾಕ್ಷ ಈ ಪ್ರಕರಣದ ಸಂಗತಿಗೆ ಸಂಭಂಧಿಸಿದಂತೆ ಪುಷ್ಟೀಕರಿಸಲು ಸಾಕ್ಷಾದಾರದ ಕೊರತೆ ಇದ್ದು ಮತ್ತು ಅವರು ಪ್ರತಿಕೂಲ ಸಾಕ್ಷ ನುಡಿದಿರುತ್ತಾರೆ. ಮೇಲ್ಕಂಡ ವಿವರಣೆ ಆಧಾರದಲ್ಲಿ ನ್ಯಾಯಾಲಯದ ದೃಷ್ಟಿಯಲ್ಲಿ ಅಭಿಯೋಜನೆಯು ಆರೋಪಿತರ ಮೇಲೆ ಹೊರಿಸಲಾದ ಆರೋಪಣೆಗಳನ್ನು ಸಾಬೀತುಪಡಿಸುವ ನಂಬಲು ಅರ್ಹವಾದ ಪೂರಕ ಸಾಕ್ಷವನ್ನು ಅಭಿಯೋಜನೆಯವರು ಹಾಜರು ಮಾಡಲು ವಿಫಲರಾಗಿರುತ್ತಾರೆ. ಕಾರಣ ಆರೋಪಿತರ ವಿರುದ್ಧ ಆರೋಪಿಸಿರುವಂತೆ ಕೃತ್ಯ ಎಸಗಿದ್ದಾರೆಂದು ಹೇಳಲಾಗುವುದಿಲ್ಲ. ಆರೋಪಿತರ ವಿರುದ್ಧ ಅಪರಾಧಗಳನ್ನು ನ್ಯಾಯಾಲಯದ ಮುಂದೆ ಸಂಶಯತೀತವಾಗಿ ರುಜುವಾತುಪಡಿಸದೇ ಇರುವುದರಿಂದ ಸಂಶಯದ ಅನುಕೂಲತೆಯನ್ನು ಆರೋಪಿತರಿಗೆ ಕೊಡಲಾಗುವುದು. ಮೇಲೆ ಹೇಳಿದ ಕಾರಣಗಳಿಗಾಗಿ ಅಂಶ 1 ರಿಂದ ಅಂಶ 4 ಕ್ಕೆ ನಕಾರಾತ್ಮವಾಗಿ ಉತ್ತರಿಸಲಾಗಿದೆ.

**15. ಅಂಶ:5** ಅಂಶ 1 ರಿಂದ 4 ರಲ್ಲಿ ಚರ್ಚಿಸಲಾದಂತೆ ಈ ಅಂಶವನ್ನು ಈ ಕೆಳಗಿನಂತೆ ಉತ್ತರಿಸುತ್ತೇನೆ.

***ಆದೇಶ ***

**ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿರುವ ಅಧಿಕಾರವನ್ನು ಚಲಾಯಿಸುತ್ತಾ 1 ರಿಂದ 3 ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506**

**ಸಹವಾಚಕ ಕಲಂ 34 ರ ಅನ್ವಯ ಅಪರಾಧಗಳಲ್ಲಿ ನಿರ್ದೋಷಿ ಎಂದು ಬಿಡುಗಡೆ ಮಾಡಿ ಸ್ವತಂತ್ರನೆಂದು ನಿರ್ದೇಶಿಸಲಾಗಿದೆ.**

**ಫಿ.ಎಫ್.ನಂಃ 190/2020 ದಿನಾಂಕ 15-05-2020 ರಲ್ಲಿ ತೋರಿಸಿದ ದೊಣ್ಣೆ ಬೆಲೆ ರಹಿತವಾಗಿದ್ದು ಅದನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.**

(ಶೀಘ್ರಲಿಪಿಗಾರರಿಂದ ಬೆರಳಚ್ಚು ಮಾಡಿಸಿ ಅದನ್ನು ತಿದ್ದುಪಡಿ ಮಾಡಿ 2026 ನೇ ಇಸವಿ ಜೂನ್ ತಿಂಗಳ 10 ನೇ ದಿನಾಂಕದಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಸಹಿ/-

**(ಶ್ರೀಮತಿ. ಹರ್ಷಿತ)**
**ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಂತಾಮಣಿ.**

***ಅನುಭಂದ ***

**1. ಅಭಿಯೋಜನೆಯ ಪರ ವಿಚಾರಿಸಲಾದ ಸಾಕ್ಷಿಗಳ ಪಟ್ಟಿಃ**

ಪ್ರಾಸಾ-1 - ಸೊಣ್ಣೇಗೌಡ.
ಪ್ರಾಸಾ-2 - ಶ್ರೀನಿವಾಸ
ಪ್ರಾಸಾ-3 - ಗೋಪಾಲ.

**2. ಆರೋಪಿತರ ಪರ ವಿಚಾರಿಸಲಾದ ಸಾಕ್ಷಿಗಳ ಪಟ್ಟಿಃ**

- ಇಲ್ಲಾ -

**3. ಅಭಿಯೋನೆಯ ಪರ ಗುರುತಿಸಲಾದ ದಾಖಲೆಗಳ ಪಟ್ಟಿಃ**

ನಿಪಿ-1 - ಪ್ರಾಸಾ-1 ರವರ ದೂರು.
ನಿಪಿ-1(ಎ) - ಪ್ರಾಸಾ-1 ರವರ ಸಹಿ.
ನಿಪಿ-2 - ಪ್ರಾಸಾ-1 ರವರ ಮರುಹೇಳಿಕೆ.
ನಿಪಿ-3 - ಪ್ರಾಸಾ-2 ರವರ ಹೇಳಿಕೆ.
ನಿಪಿ-4 - ಪ್ರಾಸಾ-3 ರವರ ಹೇಳಿಕೆ.

**4. ಆರೋಪಿತರ ಪರ ಗುರುತಿಸಲಾದ ದಾಖಲೆಗಳ ಪಟ್ಟಿಃ**

- ಇಲ್ಲಾ -

**5. ಗುರುತಿಸಲಾದ ಮುದ್ದೆಮಾಲುಗಳುಃ**

– ಇಲ್ಲಾ –

ಸಹಿ/–

**(ಶ್ರೀಮತಿ. ಹರ್ಷಿತ)**
**ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ**
**ದರ್ಜೆ ನ್ಯಾಯಿಕ ದಂಡಾಧಿಕಾರಿಯವರ**
**ನ್ಯಾಯಾಲಯ, ಚಿಂತಾಮಣಿ.**